Rotary

ರೋಟರಿ **ಐಸಿರಿ** ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 22

ದಿನಾಂಕ: 02.12.2025



Rtn. Anil Kumar
President



Rtn. Krishnappa
Secretary


## ವಲಯದ ಕ್ರೀಡಾಕೂಟದಲ್ಲೂ ಹದಿನೆಂಟು ಬಹುಮಾನ ಗೆದ್ದ ಐಸಿರಿ




ನವೆಂಬರ್ ಆರಂಭದಲ್ಲಿ ನಡೆದ ವಲಯದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಒಂಭತ್ತು ಬಹುಮಾನಗಳನ್ನು ಗೆದ್ದ ರೋಟರಿ ಐಸಿರಿ ನವೆಂಬರ್ ಅಂತ್ಯದಲ್ಲಿ ನಡೆದ ವಲಯ ಕ್ರೀಡಾ ಸ್ಪರ್ಧೆ "ರೋಟಾಕ್ರೌನ್" ನಲ್ಲಿ ಹದಿನೆಂಟು ಬಹುಮಾನಗಳನ್ನು ಗಳಿಸಿ ಸಂತಸಸಿರಿಯನ್ನು ದ್ವಿಗುಣಗೊಳಿಸಿತು. ನವೆಂಬರ್ 29 ಮತ್ತು 30ರಂದು ರೋಟರಿ ಕ್ಲಬ್ ಮಣಿಪಾಲ ಟೌನ್ ಆತಿಥ್ಯದಲ್ಲಿ ಮಾಹೆಯ ಕ್ರೀಡಾಂಗಣದಲ್ಲಿ ನಡೆದ ಈ ಸ್ಪರ್ಧೆಗಳಲ್ಲಿ ಐಸಿರಿಯ ಕ್ರೀಡಾಸಂಯೋಜಕ ರೊ. ಅಶೋಕ ನಾಯಕ್ 50ಮೀ. ಓಟದಲ್ಲಿ ತೃತೀಯ, ಜೋನ್ ಚಿರಾಗ್ ಚೆಸ್ (ಜೂನಿಯರ್)ನಲ್ಲಿ ದ್ವಿತೀಯ, ಆನ್ನೆಟ್ ದ್ವಿತಿ ಶೆಣೈ ಲಾಂಗ್ ಜಂಪ್ ನಲ್ಲಿ ಪ್ರಥಮ ಮತ್ತು ಬಾಸ್ಕೆಟ್ ಬಾಲ್ ತ್ರೋನಲ್ಲಿ ದ್ವಿತೀಯ, ರೊ. ಗೀತಾಶ್ರೀ ಎಮ್.ಉಪಾಧ್ಯ ಹಿರಿಯರ 200ಮೀ. ನಡಿಗೆಯಲ್ಲಿ ತೃತೀಯ, ರೊ. ಕೃಷ್ಣಪ್ಪ ಶಾಟ್ ಪುಟ್ ನಲ್ಲಿ ದ್ವಿತೀಯ, ರೊ. ನಾಗರಾಜ ನಾಯಕ್ 400 ಮೀ. ಓಟದಲ್ಲಿ ತೃತೀಯ, ರೊ. ಸಂದೀಪ್ ಕುಮಾರ್ 400ಮೀ ಓಟದಲ್ಲಿ ದ್ವಿತೀಯ ಮತ್ತು 200ಮೀ ಓಟದಲ್ಲಿ ತೃತೀಯ, ಜೋನ್ ಶ್ಲೋಕ್ ಬ್ಯಾಡ್ಮಿಂಟನ್ ಸಿಂಗಲ್ಸ್ ನಲ್ಲಿ ದ್ವಿತೀಯ ಮತ್ತು ಲಾಂಗ್ ಜಂಪ್ ನಲ್ಲಿ ತೃತೀಯ, ರೊ. ಸ್ಮಿತಾ ಕಾಮತ್ ಬಾಸ್ಕೆಟ್ ಬಾಲ್ ತ್ರೋನಲ್ಲಿ ದ್ವಿತೀಯ, ಆನ್ನೆಟ್ ವೇದಾ ಬ್ಯಾಡ್ಮಿಂಟನ್ ಸಿಂಗಲ್ಸ್ ನಲ್ಲಿ ಪ್ರಥಮ, ಡಾ. ವಿಶಾಲ್ ಭಟ್ ಚೆಸ್ (ಸೀನಿಯರ್)ನಲ್ಲಿ ದ್ವಿತೀಯ, ಅನ್ನೆಟ್ ಯಶಾ ಲಾಂಗ್ ಜಂಪ್ ನಲ್ಲಿ ದ್ವಿತೀಯ, ಬ್ಯಾಡ್ಮಿಂಟನ್ ಡಬಲ್ಸ್ ನಲ್ಲಿ ರೊ. ಸಂದೀಪ್ ಕುಮಾರ್ ಮತ್ತು ರೊ. ಕೃಷ್ಣಪ್ಪ ಜೋಡಿ ದ್ವಿತೀಯ, ಆನ್ನೆಟ್ ವೃದ್ಧಿ ಮತ್ತು ಆನ್ನೆಟ್ ದಿಯಾ ಜೋಡಿ ಪ್ರಥಮ, ಜೋನ್ ಚಿರಾಗ್ ಮತ್ತು ಜೋನ್ ಶ್ಲೋಕ್ ಜೋಡಿ ದ್ವಿತೀಯ ಬಹುಮಾನಗಳನ್ನು ಗಳಿಸಿದರು.

## ಪ್ರೇರಣಾ ಸಿರಿ: ರೋಟರಿ ಮಾಹಿತಿ

*(Continued from the previous issues)*



Past Assistant Governor
Rtn. MPHF. Dr. Ganesha A
Treasurer, Rotary Aisiri

**Reasons Why a Rotarian should contribute to The Rotary Foundation (TRF):**

17. To keep our promise to the children of the world that Polio would be history for them.
18. Charity Navigator is America's largest independent charity evaluator. Four Star is their highest ranking. From 2007, TRF bagged the Four Stars every year.
19. Sir Winston Churchill has said, "We make a living by what we get, but we make a life by what we give". By joining Rotary we become a member of the club, but when we give to TRF, we become a true Rotarian.
20. Like Corporate Social Responsibility (CSR) for companies, individuals too, must have this responsibility may be called as again CSR (Citizens Social Responsibility). TRF is an ideal platform to discharge our CSR obligations.
21. A message by TRF Trustee Chairman Kalyan Banerjee in 2017 May says that in villages around the world, we see hundreds of signs identifying Rotary Foundation projects. Then, when we see these signs, we feel proud to be Rotarian and we can think "my contributions helped make this happen" only if we contribute to TRF.

Thus, friends by looking at the above points, I feel we can be proud of our TRF and start donating more generously to the extent possible. Thank you.

*(Ref. 'Know Your Rotary' by Rtn. N. Bhaskaran Pillai)* - Rtn. MPHF. Dr. Ganesha A.

---



ಆತ್ಮೀಯರೇ,

ಇಂದಿನ ರೊಟಾಕ್ರೌನ್ 2025 ವಲಯ ಮಟ್ಟದ ಕ್ರೀಡಾ ಕೂಟದಲ್ಲಿ ರೋಟರಿ ಐಸಿರಿಯ ಕ್ರೀಡಾ ಸಂಯೋಜಕರಾದ ರೋ. ಅಶೋಕ್ ನಾಯಕ್ ರ ಮುಂದಾಳತ್ವದಲ್ಲಿ ಹೆಚ್ಚಿನ ಸದಸ್ಯರನ್ನು ಒಳಗೊಂಡು ಯಶಸ್ವಿಯಾದ ಪಾಲ್ಗೊಳ್ಳುವಿಕೆಗಾಗಿ ಹಾಗೂ ವಿಜೇತರಾದ ಮತ್ತು ಪಾಲ್ಗೊಂಡ ಎಲ್ಲರಿಗೂ ಧನ್ಯವಾದಗಳು.

**ರೊ. ಅನಿಲ್ ಕುಮಾರ್**
ಅಧ್ಯಕ್ಷರು, ರೋಟರಿ ಐಸಿರಿ ಪರ್ಕಳ



Congratulations.

It is the Fellowship, Friendship and involvement of family members that made success in both cultural and sports. We need to keep it up in the days to come. Thank you.

Rtn. MPHF. Dr. Ganesha A.
Treasurer, Rotary Aisiri

---



ವಲಯ ಮಟ್ಟದ ಕ್ರೀಡಾಕೂಟ ಕಾರ್ಯಕ್ರಮ ದಲ್ಲಿ ಭಾಗವಹಿಸಿದ ಮತ್ತು ಬಹುಮಾನ ವಿಜೇತ ರೋಟರಿ ಐಸಿರಿ ಎಲ್ಲಾ ಸದಸ್ಯರಿಗೂ ಮತ್ತು ಕುಟುಂಬದವರಿಗೂ ತುಂಬುಹೃದಯದ ಧನ್ಯವಾದಗಳು... ವಿಶೇಷವಾಗಿ ನಮ್ಮೊಂದಿಗಿದ್ದು ನಮ್ಮನ್ನು ಪ್ರೋತ್ಸಾಹಿಸಿದ ಮಂಜುನಾಥ ಉಪಾದ್ಯ ಸರ್.. ಗೀತಕ್ಕ... ಪ್ರಕಾಶ್ ಶೆಣೈ ಸರ್... ಲ್ಯಾಗ್ವಾಂಕರ್ ಸರ್...ಇವರೆಲ್ಲರಿಗೂ ಪ್ರೀತಿಯ ಕೃತಜ್ಞೆಗಳು...

Finally thanks a lot to those who directly or indirectly supported us during the event... 🙏 🙏 🙏

-Rtn. Ashok Nayak
Sports Co-ordinator, Rotary Aisiri



*ಒಂದು ಕಿವಿಮಾತು..*

ಕ್ರೀಡೆ ಒಂದು ಕಲೆ.. ಬಹಳ ಅಭ್ಯಾಸ, ಸ್ಪೂರ್ತಿ ಹಾಗೂ ಸದೃಢ ದೇಹಬಲ ಬೇಕಾಗುವ ಕ್ರೀಡಾಕೂಟದಲ್ಲಿ ಹಲವಾರು ಬಗೆಯ ಕ್ರೀಡೆಗಳಿದ್ದುವು... ಐಸಿರಿಯ ಸದಸ್ಯರೆಲ್ಲರೂ ಸ್ಪೂರ್ತಿಯಿಂದ ಭಾಗವಹಿಸಿದ್ದೇ ಸಾಧನೆ. ಹೊಸ ಸದಸ್ಯರ ಸೇರ್ಪಡೆಯಿಂದ ಇನ್ನಷ್ಟು ಜನ ಬಲ ಹೆಚ್ಚಿಸೋಣ.. ಆದರೂ ಎಲ್ಲದರಲ್ಲೂ ನಿರೀಕ್ಷೆಗಳು ಬೇಡ... ಐಸಿರಿಯ ಉತ್ತಮ ಒಗ್ಗಟ್ಟು ಹಾಗೂ ದಿನವಿಡೀ ನಿಂತು ಸಾಧ್ಯವಾದಷ್ಟು ಭಾಗವಹಿಸಿ ತೋರಿದ sportsman spirit ಗೆ ನಮನಗಳು... ನಮ್ಮ ಮಟ್ಟಿಗೆ ನಾವು ಗೆದ್ದಿದ್ದೇವೆ... ಅದೇ ಸಂತೋಷ.. ಎಲ್ಲರಿಗೂ ಧನ್ಯವಾದಗಳು.

ರೊ. ಸ್ಮಿತಾ ಕಾಮತ್
ZL



Wonderful performance ..... President Rtn Anil, Secretary Rtn Krishnappa 💐 😊 👍 🙏 Sports coordinator Rtn Ashok.... superb initiative, involvement made all difference 😊 🙏 💐 Zl Smitha Madam.... Your support, involvement Encouragement, Leadership, dedication, decision making.... superb... Wonderful 👏 😊 👍 💐 🙏 And above all Rtn Sandeep.... 😊 💐 🙏 Rtn Guru, Rtn Geetha madam, Rtn Panduranga sir, Rtn Manjunath Upadya sir, 😊 💐 🙏 Rtn Nagaraj Nayak......what a performance 😍 Cricket means now for me Rtn Nagaraj Nayak 😊 💐 🙏

-Rtn. K. Prakash Shenoy
Community Service Director, Rotary Aisiri

## ಬೌದ್ಧಿಕ ಸಿರಿ **ಜೀವನವೆಂಬ ಬಸ್ ಪ್ರಯಾಣ!**

ಜೀವನವೆಂಬುದು ಒಂದು ದೀರ್ಘ ಬಸ್ ಪ್ರಯಾಣದಂತೆ. ಸಮಯವೇ ಅದರ ಚಾಲಕ, ವಿಧಿಯೇ ಅದರ ಮಾರ್ಗದರ್ಶಕ.

ಪ್ರಯಾಣಿಕರು ಬೇರೆ ಬೇರೆ ನಿಲ್ದಾಣಗಳಲ್ಲಿ ಬಸ್ಸನ್ನು ಹತ್ತುತ್ತಾರೆ. ಬೇರೆ ಬೇರೆ ನಿಲ್ದಾಣಗಳಲ್ಲಿ ಇಳಿಯುತ್ತಾರೆ. ಕೆಲವರು ಲಗ್ಗೇಜ್ ಜೊತೆಗೆ, ಇನ್ನು ಕೆಲವರು ಬರಿಗೈಯಲ್ಲಿ, ಕೆಲವರಿಗೆ ಆಸನ ಸಿಗುತ್ತದೆ, ಕೆಲವರಿಗೆ ನಿಂತುಕೊಂಡೇ ಪ್ರಯಾಣಿಸುವ ಅನಿವಾರ್ಯತೆ ಎದುರಾಗುತ್ತದೆ. ನಿಂತ ಪ್ರಯಾಣಿಕರು, ಯಾರಾದರೂ ಇಳಿದರೆ ತನಗೆ ಕುಳಿತುಕೊಳ್ಳಲು ಆಸನ ಸಿಗಬಹುದೆಂದು ನಿರೀಕ್ಷೆಯಲ್ಲಿರುತ್ತಾರೆ.

ಕೆಲವರಿಗೆ ಬಸ್ಸಿನ ಪ್ರಯಾಣ ಸುಖಕರವಾಗಿರುತ್ತದೆ; ಕೆಲವರಿಗೆ ಸಂಕಷ್ಟಪೂರ್ಣವಾಗಿರುತ್ತದೆ. ಚಿಕ್ಕಚಿಕ್ಕ ಚರ್ಚೆ, ಅಸಮಾಧಾನ, ಗುದ್ದಾಟಗಳೂ ಆಗುಬಹುದು, ಕೆಲವೊಮ್ಮೆ ನಾವು ನಮ್ಮ ಆಸನವನ್ನು ಬೇರೆಯವರಿಗೆ ಕೊಡಬೇಕಾಗುತ್ತದೆ, ಕೆಲವೊಮ್ಮೆ ನಮ್ಮ ಆಸನವನ್ನು ಕಳೆದುಕೊಳ್ಳಬೇಕಾಗುತ್ತದೆ.

ಬಸ್ಸಿನ ಚಕ್ರಗಳು ಮುಂದೆ ಸಾಗುತ್ತಲೇ ಇರುತ್ತವೆ. ಅದೇ ರೀತಿ ಕಾಲವೂ ಯಾರನ್ನೂ ಕಾಯದೆ ತನ್ನ ಪ್ರಯಾಣವನ್ನು ಮುಂದುವರೆಸುತ್ತದೆ.

ಈ ಪ್ರಯಾಣದಲ್ಲಿ ಕೆಲವರು ಮಧ್ಯದಲ್ಲೇ, ಅವರ ಸ್ಟಾಪ್ ಬಂದಕೂಡಲೇ ಇಳಿದು ಬಿಡುತ್ತಾರೆ. ಹೊಸ ಪ್ರಯಾಣಿಕರೂ ಬಸ್ಸಿಗೆ ಏರುತ್ತಾರೆ. ಹತ್ತಿ – ಇಳಿಯುವ ನಡುವಿನ ಅವಧಿಯಲ್ಲಿ ನಾವು ಸಹಪ್ರಯಾಣಿಕರೊಂದಿಗೆ ಅಥವಾ ಸಹಪ್ರಯಾಣಿಕರು ನಮ್ಮೊಂದಿಗೆ ಹೇಗೆ ವರ್ತಿಸುತ್ತೇವೆ ಅನ್ನುವುದು ಮುಖ್ಯ.

ಕೆಲವರು ತಾವಾಯಿತು ತಮ್ಮ ಪ್ರಯಾಣವಾಯಿತು ಎಂದು ತಮ್ಮಷ್ಟಕ್ಕೆ ಇದ್ದರೆ, ಇನ್ನು ಕೆಲವರು ಕೊಸರಾಡುತ್ತಾ ಸಹಪ್ರಯಾಣಿಕರ ಸಮಾಧಾನವನ್ನು ಕಸಿದುಕೊಳ್ಳಬಹುದು. ಪ್ರಯಾಣದುದ್ದಕ್ಕೂ ಕೆಲವರು ಗುರ್ ಎನ್ನುತ್ತಿದ್ದರೆ, ಮತ್ತೆ ಕೆಲವರು ಉತ್ತಮ ಮಾತುಗಳಿಂದ, ಉತ್ತಮ ಚಿಂತನೆಗಳಿಂದ ಜೀವನಪೂರ್ತಿ ಮರೆಯಲಾಗದ ಮಿತ್ರರಾಗಬಹುದು. ಕೆಲವರು ಅಲ್ಲಿಂದ ಹೋದರೆ ನೆಮ್ಮದಿ ಸಿಗಬಹುದು, ಮತ್ತೆ ಕೆಲವರು ಅಲ್ಲಿಗೆ ಹೋದರೆ ನೆಮ್ಮದಿ ಸಿಗಬಹುದು.

ತಾನೂ ನೆಮ್ಮದಿಯಿಂದ ಸಮಾಧಾನಚಿತ್ತದಿಂದಿದ್ದು, ತನ್ನೊಡನಿರುವವರ ಶಾಂತಿ – ಸಮಾಧಾನವನ್ನೂ ಗಣನೆಗೆ ತೆಗೆದುಕೊಂಡು ಗಮ್ಯದತ್ತ ಶಾಂತಚಿತ್ತದಿಂದ ಸಾಗುವವನೇ ನಿಜವಾದ ಯಶಸ್ವಿ ಪ್ರಯಾಣಿಕ. ತ್ಯಾಗ, ಸಹನೆ, ಸಹಾನುಭೂತಿ ಮತ್ತು ಹೊಂದಾಣಿಕೆಗಳಿಲ್ಲದೆ ಸುಗಮ ಪ್ರಯಾಣ ಸಾಧ್ಯವಿಲ್ಲ.

ಬಸ್ ಹತ್ತಿದವರೆಲ್ಲ ಒಂದಲ್ಲ ಒಂದು ನಿಲ್ದಾಣದಲ್ಲಿ ಇಳಿಯಲೇಬೇಕು. ಈ ಜೀವನವೆಂಬ ಬಸ್ ಪ್ರಯಾಣದಲ್ಲಿ ಪ್ರತಿಕ್ಷಣವೂ ಅಮೂಲ್ಯ. ನಾವು ಬದುಕಿದ ರೀತಿಯ ಗುರುತುಗಳು, ನಮ್ಮ ಜೊತೆಗೆ ಪ್ರಯಾಣಿಸಿದವರು ನಮ್ಮನ್ನು ಯಾವ ರೀತಿಯಲ್ಲಿ ನೆನಪಿಸಿಕೊಳ್ಳುತ್ತಾರೆ ಎಂಬುದೇ ನಮ್ಮ ನಿಜವಾದ ಸಾಧನೆ. ಅದೇ ರೀತಿ ಈ ಒಂದು ಪ್ರಯಾಣವನ್ನು ಅರ್ಥಪೂರ್ಣವಾಗಿ, ಸಾರ್ಥಕವಾಗಿ ಸುಗಮವಾಗಿರಿಸುವುದೇ ನಮ್ಮ ಧರ್ಮ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ನವೆಂಬರ್ 25ರ ಹೊರಾಂಗಣ ಸಭೆಯ ಛಾಯಾಚಿತ್ರಗಳು




















## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 20ನೇ ವಾರದ ಸಭೆ ತಾ 25/11/2025 ಮಂಗಳವಾರ, ಹೊರಾಂಗಣ ಸಭೆಯಾಗಿ ಶಾಂಭವಿ ಮಿನಿಹಾಲ್, ಆತ್ರಾಡಿ ಇಲ್ಲಿ ಜರುಗಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳಲಾಂಛನ ತೊಡಿಸಿ, ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ಪ್ರಾರ್ಥನೆ ಸಲ್ಲಿಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು. ಮುಂಬರುವ AG ಅಸೆಂಬ್ಲಿಯ ತಯಾರಿಯ ಬಗ್ಗೆ ರೊ. ಗುರುಪ್ರಸಾದ್ ಕಾಮತ್ ಮಾಹಿತಿ ನೀಡಿದರು.

ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ಆಮಂತ್ರಣ ಪತ್ರಿಕೆಯನ್ನು Zonal Learning Facilitator ರೊ. ಡಾ.ಎ. ಗಣೇಶ್ ಅವರು ಬಿಡುಗಡೆಗೊಳಿಸಿ, ದಾಖಲೆಯ ಮೇಲೆ ದಾಖಲೆ ಮಾಡುತ್ತಿರುವ ಈ ಸಾಲಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು. ಇದರೊಂದಿಗೆ ಜವಾಬ್ದಾರಿಯೂ ಹೆಚ್ಚುತ್ತಿದೆ ಎಂದು ನೆನಪಿಸಿ, ಈ ಸಾಧನೆ ನಿರಂತರವಾಗಿರಲೆಂದು ಹಾರೈಸಿದರು.

ವಾರದ ಸಂಚಿಕೆ ಐಶ್ವರ್ಯವನ್ನು ರೊ. ರಾಮಕೃಷ್ಣ ಪೂಂಜಾ ಅವರು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು. ಹೊರಾಂಗಣ ಸಭೆಯ ಪ್ರಯೋಜಕರಾದ ರೊ. ಪ್ರಕಾಶ್ ಶೆಣೈ ಇವರು ಐಸಿರಿಯ ಸದಸ್ಯರ ಮತ್ತು ಕುಟುಂಬದವರ ಸಹಕಾರವನ್ನು ಮೆಚ್ಚಿದರು. ರೊ. ಕೃಷ್ಣಪ್ಪ ಅವರು ನಾಟಕಕ್ಕೆ ನೀಡಿದ ಶ್ರಮ ಮತ್ತು ರೊ. ಡಾ. ಸ್ವಾತಿ ಪೈ ಅವರ ಪರಿಶ್ರಮವನ್ನು ಪ್ರಶಂಸಿಸಿದರು. ತಮ್ಮ ಬದುಕಲ್ಲಿ ಸಂಘಸಂಸ್ಥೆಗಳ ಪಾತ್ರ ಮತ್ತು ರೋಟರಿಯಲ್ಲಿರುವ ಅವಕಾಶಗಳನ್ನು ಮನಮುಟ್ಟುವಂತೆ ವಿವರಿಸಿದರು.

ರೊ. ರಾಜೇಶ್ ಡಿ. ಶೆಣೈ ಅವರು, ಜಿಲ್ಲಾ ಮಟ್ಟದಲ್ಲಿ ಬಹುಮಾನ ಪಡೆದ ತಂಡಕ್ಕೆ ಅಭಿನಂದಿಸಿದರು. ಮೊದಲು ವೇದಿಕೆ ಏರಿ ಮೋಹನ್ ಆಳ್ವ ಅವರಿಂದ ಬಹುಮಾನ ಪಡೆದದ್ದು ಒಂದು ಅವಿಸ್ಮರಣೀಯ ಸನ್ನಿವೇಶ ಎಂದರು. ಆನ್ ರೂಪಶ್ರೀ ಅವರು ಐಸಿರಿಯ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು. ಆನ್ ಪಲ್ಲವಿ ಶೆಣೈ ಅವರು ಬಹುಮಾನ ಘೋಷಣೆಯಾದ ಸಂತಸದ ಕ್ಷಣವನ್ನು ನೆನೆಸಿಕೊಂಡರು. ಸಭೆಯಲ್ಲಿ ಉಪಸ್ಥಿತರಿದ್ದ ಅನ್ನೆಟ್ ಮತ್ತು ಜೋನ್ ಗಳಾದ ಶ್ರೇಯಾ, ದ್ವಿತಿ, ವೃದ್ಧಿ, ದಿಯಾ, ವೇದ, ಶ್ಲೋಕ್, ಚಿರಾಗ್, ಆರವ್ ಮತ್ತು ಯಶ ಇವರು ತಮ್ಮ ಸಂತಸವನ್ನು ಹಂಚಿಕೊಂಡರು.

ಜಿಲ್ಲಾ ಮಟ್ಟದಲ್ಲಿ ಬಹುಮಾನ ಪಡೆದ ಸ್ಕಿಟ್ ನ ರೂವಾರಿ ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಸದಸ್ಯರ ಸಂತಸ ಕಂಡು ಸಂತೃಪ್ತಿ ಪಡೆದೆ ಎಂದರು. ರೊ. ಪ್ರಕಾಶ್ ಶೆಣೈ ಅವರ ನಿರಂತರ ಸಾಮಾಜಿಕ ಸೇವೆಯನ್ನು ಸ್ಮರಿಸಿ ಹೆಮ್ಮೆ ಪಟ್ಟರು. ಐಸಿರಿಯು ಜೇನುಗೂಡಂತೆ ಕೆಲಸ ಮಾಡುತ್ತಿದೆ. ಹೊಸ ದಾಖಲೆಗಳನ್ನು ಸೃಷ್ಟಿಸುತ್ತಿದೆ ಎಂದು ರೊ. ಪಾಂಡುರಂಗ ಲಗ್ವಾಂಕರ್ ಹೇಳಿಕೊಂಡರು. ರೊ. ಅಶೋಕ್ ನಾಯಕ್ ಅವರು ಐಸಿರಿ ಕೂಡು ಕುಟುಂಬದ ಅನುಭವ ನೀಡುತ್ತಿದೆ ಎಂದರು ಮತ್ತು ಬಹುಮಾನ ಪಡೆದ ಕ್ಷಣವನ್ನು ನೆನಪಿಸಿಕೊಂಡರು.

ರೊ. ಸ್ಮಿತಾ ಜಿ ಕಾಮತ್ ಅವರು ಇಂಥ ಸುದಿನ ಕನಸು ನನಸಾದಂತೆ ಎಂದು, ಐಸಿರಿಯ ಕುಟುಂಬಕ್ಕೆ ಧನ್ಯವಾದ ಸಮರ್ಪಿಸಿದರು. ರೊ.ಕೊರಗಪ್ಪ ಶೆಟ್ಟಿಗಾರ್ ಅವರು ಶೃಂಗವೈಭವದ ತಮ್ಮ ಅನುಭವಗಳನ್ನು ಸಂತಸದಿಂದ ಹಂಚಿಕೊಂಡರು. ರೊ. ಸುನಿಲ್ ಕುಮಾರ್, ಅಧ್ಯಕ್ಷರನ್ನು ಸತತ ಮೂರು ವಾರ ಹೊರಾಂಗಣ ಸಭೆ ನಡೆಸಿದ್ದಕ್ಕೆ, ರೊ. ಪ್ರಕಾಶ್ ಶೆಣೈ ಅವರನ್ನು ಭೋಜನ ಕೂಟವನ್ನು ಪ್ರಾಯೋಜಿಸಿದ್ದಕ್ಕೆ ಹಾಗೂ ರೊ. ಕೃಷ್ಣಪ್ಪ ಮತ್ತು ರೊ. ಡಾ. ಸ್ವಾತಿ ಪೈ ಅವರನ್ನು ಕಲ್ಚರಲ್ ಸ್ಪರ್ಧೆಯ ತಯಾರಿಗೆ ಶ್ರಮಿಸಿದ್ದಕ್ಕಾಗಿ ಅಭಿನಂದಿಸಿದರು.

Cultural coordinator ರೊ. ಡಾ. ಸ್ವಾತಿ ಪೈ ಅವರು ಜಿಲ್ಲಾ ಮಟ್ಟದಲ್ಲಿದ್ದ ನಿರೀಕ್ಷೆಗೂ ಮೀರಿದ ಸ್ಪರ್ಧೆ ಬಗ್ಗೆ ವಿವರಿಸಿದರು. ಐಸಿರಿ ಕುಟುಂಬದ ಬಾಂಧವ್ಯ ಹೆಚ್ಚಿರುವುದೇ ನಮ್ಮ ಗೆಲುವು ಎಂದರು. ರೊ. ಸಂದೀಪ್ ಕುಮಾರ್ ಅವರು ಎಲ್ಲ ಸ್ಕಿಟ್ ಗಳನ್ನು ಗಮನಿಸಿ, ಐಸಿರಿಯ ಪ್ರದರ್ಶನ ಅದ್ಭುತವಾಗಿತ್ತು ಎಂದರು. ರೊ. ಪ್ರಕಾಶ್ ಶೆಣೈ ಅವರು ಎಲ್ಲರಿಗೂ ಪ್ರೇರಣೆ ಎಂದರು.

ರೊ. ಪಾಂಡುರಂಗ ಲಗ್ವಾಂಕರ್ ಅವರನ್ನು ಆಧಾರ್ ತಿದ್ದುಪಡಿ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ್ದಕ್ಕಾಗಿ ಗುರುತಿಸಲಾಯಿತು. ರೊ. ಸುನಿಲ್ ಹಾಗೂ ರೊ. ರಾಜೇಶ್ ಶೆಣೈ ಅವರನ್ನು ಹುಟ್ಟುಹಬ್ಬ ಆಚರಿಸಿದ್ದಕ್ಕೆ ಗುರುತಿಸಲಾಯಿತು. ರೊ. ಡಾ. ಸ್ವಾತಿ ಪೈ ಅವರನ್ನು ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯ ಸಂಪೂರ್ಣ ಜವಾಬ್ದಾರಿ ವಹಿಸಿದ್ದಕ್ಕಾಗಿ ಅಭಿನಂದಿಸಲಾಯಿತು. ರೊ. ಸ್ಮಿತಾ ಜಿ ಕಾಮತ್ ಅವರನ್ನು ನಿರಂತರ ಸಹಕಾರಕ್ಕೆ ಗುರುತಿಸಲಾಯಿತು. ರೊ. ಪ್ರಕಾಶ್ ಶೆಣೈ ಅವರನ್ನು ಹೊರಾಂಗಣ ಸಭೆಯನ್ನು ಆಯೋಜಿಸಿ ಐಸಿರಿಯ ಗೆಲುವನ್ನು ಸಂಭ್ರಮಿಸಿದ್ದಕ್ಕಾಗಿ ಗುರುತಿಸಲಾಯಿತು.

## "ಐಶ್ವರ್ಯ" 21 ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ **ಇಪ್ಪತ್ತೊಂದನೇ** ಸಂಚಿಕೆಯನ್ನು ಫೆಲೋಶಿಪ್ ಮತ್ತು ಗ್ರೀಟಿಂಗ್ಸ್ ಸಂಯೋಜಕ ರೊ. ರಾಮಕೃಷ್ಣ ಪೂಂಜಾ 25/11/2025ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 18ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಜೋನ್ ಪ್ರಾಂಶ್ ನಡೆಸಿ, ಅಧ್ಯಕ್ಷ ರಾಜೇಶ್ ಡಿ. ಶೆಣೈ ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು.

ರೊ. ಕೃಷ್ಣಪ್ಪ ಅವರನ್ನು ಅತ್ಯುತ್ತಮ ಸ್ಕಿಟ್ ರಚಿಸಿ ನಿರ್ದೇಶಿಸಿದ್ದಕ್ಕಾಗಿ ಗುರುತಿಸಲಾಯಿತು. ಅಧ್ಯಕ್ಷ ರೊ. ಅನಿಲ್ ಕುಮಾರ್ ಐಸಿರಿಯಲ್ಲಿ ಎಲ್ಲರೂ ಪರಸ್ಪರ ಸೌಹಾರ್ದತೆಯಿಂದ ಕೆಲಸ ಮಾಡುತ್ತಿದ್ದಾರೆ ಅದಕ್ಕಾಗಿ ಯಶಸ್ಸು ಲಭಿಸಿದೆ. ಇದೇ ರೀತಿ ಮುಂದುವರೆಯಬೇಕು ಎಂದು ಕರೆ ನೀಡಿದರು.

ಜಿಲ್ಲಾ ಮಟ್ಟದ ಸ್ಕಿಟ್ ನಲ್ಲಿ ಭಾಗವಹಿಸಿದ ಸ್ಪರ್ಧಿಗಳಿಗೆ ಪ್ರಮಾಣಪತ್ರ ನೀಡಲಾಯಿತು. ಲಕ್ಕಿ ರೋಟರಿಯನ್ ಆಯ್ಕೆಯನ್ನು ಜೋನ್ ಪ್ರಾಂಶ್ ಅವರು ನೆರವೇರಿಸಿದರು. ರೊ. ರಾಜೇಶ್ ಡಿ. ಶೆಣೈ ಅವರು lucky Rotarian ಆಗಿ ಆಯ್ಕೆಯಾದರು. ಶ್ರೀ ಸುನೀಲ್ ಕುಮಾರ್ ಅವರನ್ನು probable member ಎಂದು ಗುರುತಿಸಲಾಯಿತು. ಕುಮಾರಿ ಗಾನವಿ ಅವರನ್ನು ಇಂಪಾದ ಕೊಳಲು ವಾದನದಿಂದ ಎಲ್ಲರನ್ನೂ ರಂಜಿಸಿದ್ದಕ್ಕೆ ಗುರುತಿಸಿ ಅಭಿನಂದಿಸಲಾಯಿತು.

ರೊ. ಗುರುಪ್ರಸಾದ್ ಕಾಮತ್ ಅವರು ಧನ್ಯವಾದ ಸಮರ್ಪಿಸಿದರು. ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ಸ್ವಾದಿಷ್ಟ ಸಹಭೋಜನದೊಂದಿಗೆ ಸಭೆ ಮುಕ್ತಾಯಗೊಂಡಿತು.